


ಚಿತ್ರ : ಪುರುಷೋತ್ತಮ ಕಾರಂತ

# ನಿಜವಾಗಿಯೂ ಚಮ್ಮಾರರೇ

ರಾಜರ್ಷಿ ಜನಕನು ಜ್ಞಾನಿಗಳಿಗೆ ಆಶ್ರಯದಾತನೆಂದು ಪ್ರಸಿದ್ಧಿ. ಅವನ ಸಭೆ ಘನ ವಿದ್ವಾಂಸರಿಂದ ತುಂಬಿರುತ್ತಿತ್ತು. ಅವರೊಡನೆ ವೇದಾಂತ ಚರ್ಚೆಯಲ್ಲಿ ಅವನು ಕಾಲ ಕಳೆಯುತ್ತಿದ್ದ.

ಒಂದು ದಿನ ಋಷಿಪುತ್ರನೊಬ್ಬನು ರಾಜನ ಆಸ್ಥಾನವನ್ನು ಪ್ರವೇಶಿಸಿದನು. ಅವನು ತುಂಬ ಕುರೂಪಿಯಾಗಿದ್ದ. ಅವನ ಅಂಗಾಂಗಗಳೆಲ್ಲ ವಕ್ರವಕ್ರವಾಗಿದ್ದವು. ಆದರೆ ಮುಖ ಮಾತ್ರ ತೇಜಸ್ಸಿನಿಂದ ಹೊಳೆಯುತ್ತಿತ್ತು. ಅವನು ಪ್ರವೇಶಿಸುತ್ತಿದ್ದಂತೆ ಸಭೆ ಅಲೌಕಿಕ ಪ್ರಭೆಯಿಂದ ಪ್ರಕಾಶಿಸತೊಡಗಿತು. ಅವನ ಹೆಸರು ಅಷ್ಟಾವಕ್ರ.

ಸಭೆಯಲ್ಲಿ ನೆರೆದಿದ್ದ ವಿದ್ವಾಂಸರೆಲ್ಲರೂ ಆಶ್ಚರ್ಯದಿಂದ ಅವನ ಕಡೆ ತಿರುಗಿದರು. ಅವನ ವಿಕೃತರೂಪವನ್ನು ನೋಡಿ ಅವರೆಲ್ಲ ನಗತೊಡಗಿದರು. ಅಷ್ಟಾವಕ್ರನೂ ನಕ್ಕನು.

ಜನಕನು ಅಷ್ಟಾವಕ್ರನನ್ನು ಆದರದಿಂದ ಬರಮಾಡಿಕೊಂಡನು. ಅನಂತರ ಅವನ ನಗುವಿಗೆ ಕಾರಣವನ್ನು ಕೇಳಿದನು.

ಅಷ್ಟಾವಕ್ರನು ಹೇಳಿದ : "ನನ್ನ ಅರಿವು ಹುಸಿಯಾಯಿತು. ನಿನ್ನ ಆಸ್ಥಾನದಲ್ಲಿ ವಿದ್ವಾಂಸರ ಒಂದು ದೊಡ್ಡ ಗುಂಪೇ ಇದೆಯೆಂದು ನಾನು ಭಾವಿಸಿದ್ದೆ. ಆದರೆ ಇಲ್ಲಿರುವುದು ಚಮ್ಮಾರರ ಸಮೂಹ. ಇದನ್ನು ತಿಳಿದು ನನಗೆ ನಗು ಬಂತು."

"ವಿದ್ವಾಂಸರನ್ನು ಹೀಗೇಕೆ ತೆಗಳುತ್ತಿರುವಿರಿ?"— ಜನಕ ಕೇಳಿದ.

"ರಾಜ, ಯಾರು ಈ ತೊಗಲು ಎಲುಬನ್ನು ಕಂಡು ಪರೀಕ್ಷಿಸುವರೊ ಅವರು ನಿಜವಾಗಿಯೂ ಚಮ್ಮಾರರೇ"–– ಅಷ್ಟಾವಕ್ರನ ಈ ಮಾತನ್ನು ಕೇಳಿ ಇಡೀ ಸಭೆ ಪಶ್ಚಾತ್ತಾಪದಿಂದ ತಲೆ ತಗ್ಗಿಸಿತು.